ಇನ್ನಷ್ಟು ಸುದ್ದಿ ಪುಟ 13ರಲ್ಲಿ

ಕನ್ನಡಪ್ರಭ
ಮಂಗಳವಾರ 5.05.2026

ಗರಿಷ್ಠ 33°c | ಕನಿಷ್ಠ 23°c



ಮಡಹಳ್ಳೀಲಿ ₹ 40 ಲಕ್ಷ ವೆಚ್ಚ ಸಿಸಿ ರಸ್ತೆಗೆ ಶಾಸಕರಿಂದ ಭೂಮಿಪೂಜೆ

ಗುಂಡ್ಲುಪೇಟೆ: ಪಟ್ಟಣದ ಬಳಿಯ ತಾಲೂಕಿನ ಮಡಹಳ್ಳಿ ಗ್ರಾಮದಲ್ಲಿ 40 ಲಕ್ಷ ರು. ವೆಚ್ಚದ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಭೂಮಿ ಪೂಜೆ ನೆರವೇರಿಸಿದರು. ಗುದ್ದಲಿ ಪೂಜೆ ಬಳಿಕ ಮಾತನಾಡಿದ ಶಾಸಕರು, ಗ್ರಾಮದ ಉಪ್ಪಾರ ಭವನದ ಮುಂದುವರಿದ ಕಾಮಗಾರಿಗೂ ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿ ಆರಂಭಿಸಲಾಗುವುದು ಎಂದರು. ಸಿಎಂ ವಿಶೇಷ ಅನುದಾನದಲ್ಲಿ 4.5 ಕೋಟಿ ದೇವಸ್ಥಾನಗಳ ಅಭಿವೃದ್ಧಿ, 8 ಕೋಟಿ ಸಮುದಾಯ ಭವನಕ್ಕೆ, ಪಿಡಬ್ಲ್ಯೂಡಿಗೆ 12.5 ಕೋಟಿ ರು. ಅನುದಾನ ನೀಡಲಾಗಿದೆ ಎಂದು ಶಾಸಕರು ಹೇಳಿದರು. ಶಾಸಕರೊಂದಿಗೆ ಕಾಡ ಮಾಜಿ ಅಧ್ಯಕ್ಷ ಎಚ್.ಎಸ್. ನಂಜಪ್ಪ, ಗ್ರಾಮದ ಮುಖಂಡ ಶಿವಮೂರ್ತಿ, ಮುಖಂಡರಾದ ಮಹದೇವಪ್ಪ, ಬಸವಶೆಟ್ಟಿ, ಮಧು, ಮಣಿ ಮಡಹಳ್ಳಿ ಸೇರಿದಂತೆ ಹಲವರಿದ್ದರು.



ಚಾಮರಾಜನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಗೊರುಕನ ಪತ್ರಿಕೆಯ ಪುಟ ವಿನ್ಯಾಸಕಾರ ಪಿ.ಮಹದೇವಸ್ವಾಮಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.ಜಿಲ್ಲಾಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ ಹಾಗೂ ಹಲವರಿದ್ದರು.



ಗುಂಡ್ಲುಪೇಟೆ ತಾಲೂಕಿನ ಕೋಟೆಕೆರೆ ವೀರಪ್ಪ ದೇವಸ್ಥಾನದ ಉದ್ಘಾಟನೆ ಬಳಿಕ ಸಮಾರಂಭದಲ್ಲಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಬಂಗಾರ ನಾಯಕ ಹಾಗೂ ಕೋಟೆಕೆರೆ ಗ್ರಾಮದ ಯಜಮಾನರು, ಯುವಕರು ಇದ್ದರು.

ಸುದ್ದಿ ಸಿಂಚನ

ಪಿ.ಮಹದೇವಸ್ವಾಮಿ ನಿಧನಕ್ಕೆ ಶ್ರದ್ಧಾಂಜಲಿ

ಚಾಮರಾಜನಗರ: ಗೊರುಕನ ಪತ್ರಿಕೆಯ ಪುಟ ವಿನ್ಯಾಸಕ ಪಿ.ಮಹದೇವಸ್ವಾಮಿ ನಿಧನ ಹಿನ್ನೆಲೆಯಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನಗರದ ಜಿಲ್ಲಾಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಪಿ.ಮಹದೇವಸ್ವಾಮಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಬಳಿಕ ಮೌನಾಚರಣೆ ನಡೆಸಲಾಯಿತು. ಸಂಘದ ಜಿಲ್ಲಾಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ ಮಾತನಾಡಿ, ಪಿ.ಮಹದೇವಸ್ವಾಮಿ ಅವರು ಕಳೆದ 12 ವರ್ಷಗಳಿಂದಲೂ ಗೊರುಕನ ಪತ್ರಿಕೆಯಲ್ಲಿ ಪುಟ ವಿನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು, ಅವರ ಆಕಾಲಿಕ ನಿಧನದಿಂದ ತುಂಬಲಾರದ ನಷ್ಟ ಉಂಟಾಗಿದ್ದು, ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ಆ ದೇವರು ನೀಡಲಿ ಎಂದರು. ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ಪತ್ರಕರ್ತರಾದ ಎಸ್.ಎಂ.ನಂದೀಶ್, ಫಾಲಲೋಚನಾ ಆರಾಧ್ಯ, ಲಿಂಗಪ್ಪ, ಬದನಗುಪ್ಪೆ ಮಲ್ಲಣ್ಣ, ಬಸವಣ್ಣ, ಚಂದ್ರ ಶೇಖರ್, ನಂಜುಂಡನಾಯಕ, ವಿಜಯ್,ಬಸವರಾಜು, ರವಿಕುಮಾರ್,ಮಂಜುಕುಮಾರ್,ಚರಣ್ಇತರರಿದ್ದರು.

ಎಸ್ಸೆಸ್ಸೆಲ್ಸಿ: ಸುರಾಪುರ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳ ಸಾಧನೆ

ಕೊಳ್ಳೇಗಾಲ: ತಾಲೂಕಿನ ಸುರಾಪುರ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಇತ್ತೀಚೆಗೆ ನಡೆದ ಎಸ್ಎಸ್ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದು, ಶಾಲೆಯ ವಿದ್ಯಾರ್ಥಿನಿ ಲಕ್ಷ್ಮೀ 625 ಅಂಕಗಳಿಗೆ 603 ಅಂಕ ಗಳಿಸುವ ಮೂಲಕ ಅತ್ಯುನ್ನತ ದರ್ಜೆಯಲ್ಲಿ ತೇರ್ಗಡೆ ಯಾಗಿದ್ದಾರೆ. ಶಾಲೆಗೆ ಒಟ್ಟು 96.49ರಷ್ಟು ಫಲಿತಾಂಶ ದೊರೆತಿದೆ. ಶಾಲೆಯ ಚಂದ್ರಮೋಹನ್ (586), ಅಂಜಲಿ (576), ಧನುಷ್ (540), ಶೋಭ(539), ಗಣೇಶ ಕುರ್ಮಾ(536) , ಹೇಮಂತ್ ಕುರ್ಮಾ(535), ಮನ್ವಿತ್(529), ಉಮಾ(521), ಮಹದೇವಸ್ವಾಮಿ(520), ಲತಾ(508), ಅರ್ಜುನ್ (505), ಮಹಾಲಕ್ಷ್ಮೀ(501) ಅಂಕಗಳಿಸಿದ್ದಾರೆ. 7 ವಿದ್ಯಾರ್ಥಿಗಳು ಅತ್ಯುನ್ನತ, 26 ವಿದ್ಯಾರ್ಥಿಗಳು ಪ್ರಥಮ, ಇಬ್ಬರು ದ್ವಿತೀಯ ಹಾಗೂ 14 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆಂದು ಮುಖ್ಯಶಿಕ್ಷಕ ಲೋಕೇಶ್ ಅವರು ತಿಳಿಸಿದ್ದಾರೆ.





ಇಂದು ಸಾಂಸ್ಕೃತಿಕ, ಕ್ರೀಡಾ ವೇದಿಕೆಗಳ ಸಮಾರೋಪ

ಗುಂಡ್ಲುಪೇಟೆ: ಜೆಎಸ್ಎಸ್ ಮಹಾ ವಿದ್ಯಾಪೀಠ, ಜೆಎಸ್ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಮೇ 5ರಂದು ಮಂಗಳವಾರ ನಡೆಯಲಿದೆ. ಪಟ್ಟಣದ ಜೆಎಸ್ಎಸ್ ಅನುಭವ ಮಂಟಪದಲ್ಲಿ ಮೇ 5ರ ಬೆಳಗ್ಗೆ 11 ಗಂಟೆಗೆ ನಡೆವ ಸಮಾರೋಪದ ಅಧ್ಯಕ್ಷತೆಯನ್ನು ಜೆಎಸ್ಎಸ್ ಮಹಾ ವಿದ್ಯಾಪೀಠದ ಕಾಲೇಜು ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ವಹಿಸಲಿದ್ದಾರೆ. ವಿಶ್ರಾಂತ ಪ್ರಾಂಶುಪಾಲ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ.ಕೆ.ರಾಮಮೂರ್ತಿ ಸಮಾರೋಪ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಯಾಗಿ ರಾಷ್ಟ್ರ ಮಟ್ಟದ ಬಾಕ್ಸಿಂಗ್ ಪಟು ಯಶಸ್ವಿನಿ ಭಾಗವಹಿಸಲಿದ್ದಾರೆ ಎಂದು ಪ್ರಾಂಶುಪಾಲರಾದ ಡಾ.ಪಿ.ಮಹದೇವಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಲ ತ್ಯಾಜ್ಯ ಸಂಸ್ಕರಣ ಘಟಕ, ಅಕ್ಕ ಕೆಫೆಗೆ ಚಾಲನೆ

ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ, ಕೊಂಗರಹಳ್ಳಿಯಲ್ಲಿ ಸಂಸದ ಸುನೀಲ್ ಬೋಸ್, ಶಾಸಕ ಗಣೇಶ್ ಪ್ರಸಾದ್ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಗುಂಡ್ಲುಪೇಟೆ

ತಾಲೂಕಿನ ತೆರಕಣಾಂಬಿ ಮತ್ತು ಕೊಂಗರಹಳ್ಳಿ ಗ್ರಾಮದಲ್ಲಿ ಮಲ ತ್ಯಾಜ್ಯ ಸಂಸ್ಕರಣ ಘಟಕ ಮತ್ತು ಅಕ್ಕ ಕೆಫೆಗೆ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಹಾಗೂ ಸಂಸದ ಸುನೀಲ್ ಬೋಸ್ ಜೊತೆಗೂಡಿ ಚಾಲನೆ ನೀಡಿದರು.

ತಾಲೂಕಿನ ತೆರಕಣಾಂಬಿ ಗ್ರಾಮದಲ್ಲಿ ಜಿಲ್ಲಾ ಪಂಚಾಯಿತಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತಾಲೂಕು ಪಂಚಾಯಿತಿ, ತೆರಕಣಾಂಬಿ ಹಾಗೂ ಕೊಂಗರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಲ ತ್ಯಾಜ್ಯ ಸಂಸ್ಕರಣಾ ಘಟಕ ಮತ್ತು ಅಕ್ಕ ಕೆಫೆ ಉದ್ಘಾಟನೆ ಹಾಗೂ ಅಪರ್ಣ್ ದಿವಸ್ ಪೋಷಣ್ ಕಾರ್ಯಕ್ರಮವನ್ನು ಶಾಸಕ, ಸಂಸದರು ಉದ್ಘಾಟಿಸಿದರು.

ಸಂಸದ ಸುನೀಲ್ ಬೋಸ್ ಮಾತನಾಡಿ, ಮಲ ತ್ಯಾಜ್ಯ ಸಂಸ್ಕರಣ ಘಟಕ ಆರಂಭಕ್ಕೆ ಜಾಗದ ಸಮಸ್ಯೆ ಇತ್ತು, ಸದ್ಯ ಜಾಗದ ಸಮಸ್ಯೆ ನೀಗಿದ ಬಳಿಕ ಇಂದು ಅಧಿಕೃತವಾಗಿ ತೆರಕಣಾಂಬಿ, ಕೊಂಗರಹಳ್ಳಿ ಗ್ರಾಮದಲ್ಲಿಘಟಕ ಉದ್ಘಾಟನೆಗೊಂಡಿತು ಎಂದರು.

ರಾಜ್ಯ ಸರ್ಕಾರ ಪ್ರತಿ ಮನೆಯಲ್ಲೂ ಶೌಚಾಲಯ ನಿರ್ಮಿಸಲು ಶ್ರಮಿಸಿದ ಫಲವಾಗಿ ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯ ಕಟ್ಟಿದರು, ಆದರೆ ಬಳಕೆಯಾಗುತ್ತಿಲ್ಲ ಎಂದರು.

ಗ್ರಾಮೀಣ ಭಾಗದ ಜನರು ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಬೇಕು ಹಾಗೂ ಸ್ವಚ್ಛತೆ ಕಾಪಾಡಬೇಕು, ಕೇವಲ ಶೌಚಾಲಯ ಕಟ್ಟಿಸಿದರೆ ಸಾಲದು, ಅದನ್ನು ಉಪಯೋಗಿಸಿ ಎಂದು ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿ, ಮಲ ತ್ಯಾಜ್ಯ ಸಂಸ್ಕರಣ ಘಟಕಗಳು ಆರಂಭವಾದರೆ ನೀರಿನ ಸಮಸ್ಯೆ ಕೂಡ ಕಡಿಮೆಯಾಗಲಿದೆ ಎಂದರು.

ಅಕ್ಕ ಕೆಫೆ ಮಹಿಳೆಯರೇ ನಿರ್ವಹಣೆ ಮಾಡುವ ಕಾರಣ ಈ ಭಾಗದ ಜನರು ಕೂಡ ಅಕ್ಕ ಕೆಫೆಗೆ ಪ್ರೋತ್ಸಾಹ ನೀಡಬೇಕು, ಮಹಿಳೆಯರು ಸ್ವಾವಲಂಬಿ ಬದುಕುಸಾಗಿಸಲು ಸಹಾಯಕವಾಗಲಿದೆ ಎಂದರು.

ಅಕ್ಕ ಕೆಫೆಯಲ್ಲಿ ಸ್ವಚ್ಛತೆ ಕಾಪಾಡಬೇಕು, ಗುಣಮಟ್ಟದ ಆಹಾರ ನೀಡಬೇಕು. ಮೂರು ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನೆ ನಡೆಯಲಿದೆ, ರಾಜ್ಯ ಸರ್ಕಾರಮಹಿಳೆಯರುಸ್ವಾವಲಂಬಿಯಾಗಲು ಗ್ಯಾರಂಟಿಯೋಜನೆಜಾರಿಗೆ ತಂದಿದ್ದಾರೆ ಎಂದರು.

ಸಮಾರಂಭದಲ್ಲಿ ಜಿಪಂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಪಂ ಉಪ ಕಾರ್ಯದರ್ಶಿ ಶ್ರುತಿ, ಕಾಡ ಅಧ್ಯಕ್ಷ ಪಿ. ಮರಿಸ್ವಾಮಿ, ಕಾಡ ಮಾಜಿ ಅಧ್ಯಕ್ಷ ಎಚ್.ಎಸ್ .ನಂಜಪ್ಪ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್.ನಂಜುಂಡಪ್ರಸಾದ್, ಜಿಪಂ ಮಾಜಿ ಉಪಾಧ್ಯಕ್ಷರಾದ ಪಿ.ಮಹದೇವಪ್ಪ, ಕೆ.ಎಸ್. ಮಹೇಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಉಮಾಪತಿ, ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ದೇಪಾಪುರ ಸಿದ್ದಪ್ಪ ಸೇರಿದಂತೆ ಹಲವರಿದ್ದರು.




ತೆರಕಣಾಂಬಿಯಲ್ಲಿ ಮಲ ತ್ಯಾಜ್ಯ ಸಂಸ್ಕರಣ ಘಟಕ, ಅಕ್ಕ ಕೆಫೆ ಉದ್ಘಾಟನಾ ಸಮಾರಂಭವನ್ನು ಸಂಸದ ಸುನೀಲ್ ಬೋಸ್, ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ನೆರವೇರಿಸಿದರು.

ಜಿಪಂ ಸಿಇಒಗೆ ಅಭಿನಂದನೆ ಸಲ್ಲಿಸಿದ ಸಂಸದರು!

ಗುಂಡ್ಲುಪೇಟೆ: ತಾಲೂಕಿನ ತೆರಕಣಾಂಬಿ ಗ್ರಾಮದಲ್ಲಿ ಮಲ ತ್ಯಾಜ್ಯ ಸಂಸ್ಕರಣ ಘಟಕ ಹಾಗೂ ಅಕ್ಕ ಕೆಫೆ ಉದ್ಘಾಟನಾ ಸಮಾರಂಭದಲ್ಲಿ ಸಂಸದ ಸುನೀಲ್ ಬೋಸ್ ಜಿಪಂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರಿಗೆ ಅಭಿನಂದನೆ ಸಲ್ಲಿಸಿದರು.

ಮಲ ತ್ಯಾಜ್ಯ ಸಂಸ್ಕರಣ ಘಟಕ ಆರಂಭಿಸಲು ಜಾಗಕ್ಕೆ ಸಾಕಷ್ಟುಅಡೆ, ತಡೆ ಇತ್ತು. ದಿಶಾ ಸಭೆಯಲ್ಲಿ ಎಂಟೊಂಬತ್ತು ವರ್ಷಗಳಿಂದ ಆರಂಭವಾಗದಿರುವ ಬಗ್ಗೆ ನಾನು ವಿಷಯ ಪ್ರಸ್ತಾಪಿಸಿದ್ದೇ ಎಂದರು. ಆಗ ಜಿಪಂ ಸಿಇಒ ಮೋನಾರೋತ್ ಬೇಗ ಮಾಡಿಸುತ್ತೇನೆ ಎಂದು ಭರವಸೆ ನೀಡಿದ್ದರು. ನೀಡಿದ್ದ ಭರವಸೆಯಂತೆ ಉದ್ಘಾಟಿಸಿದ್ದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಗುಂಡ್ಲುಪೇಟೇಲೂ ಅಕ್ಕ ಕೆಫೆ ಆರಂಭಿಸಿ

ಗುಂಡ್ಲುಪೇಟೆ: ಅಕ್ಕ ಕೆಫೆ ತೆರಕಣಾಂಬಿ ಗ್ರಾಮದಲ್ಲಿ ಆರಂಭವಾಗಿದ್ದು, ತಾಲೂಕು ಕೇಂದ್ರದಲ್ಲಿ ಆರಂಭಿಸಲಿ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಹೇಳಿದರು.

ತಾಲೂಕಿನ ತೆರಕಣಾಂಬಿ ಗ್ರಾಮದಲ್ಲಿ ಮಲ ತ್ಯಾಜ್ಯ ಸಂಸ್ಕರಣ ಘಟಕ ಹಾಗೂ ಅಕ್ಕ ಕೆಫೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿ, ಜಿಪಂ ಉಪ ಕಾರ್ಯದರ್ಶಿ ಶ್ರುತಿ ಗುಂಡ್ಲುಪೇಟೆ ತಾಲೂಕು ಕೇಂದ್ರದಲ್ಲಿ ಆರಂಭಿಸಲು ಉತ್ಸುಕರಾಗಿದ್ದರೆ ಆರಂಭಿಸಿ ಎಂದರು. ಮಹಿಳೆಯರು ಸ್ವಾವಲಂಬಿಯಾಗುವ ಕಾಲದಲ್ಲಿ ಗುಂಡ್ಲುಪೇಟೆ ಪಟ್ಟಣದಲ್ಲಿ ಅಕ್ಕ ಕೆಫೆ ಆರಂಭಿಸಿದರೆ ಜನರಿಗೂ ಅನುಕೂಲ, ಮಹಿಳೆಯರಿಗೆ ಪ್ರೋತ್ಸಾಹಿಸಿದಂತಾಗುತ್ತದೆ ಎಂದರು.

ಕಾಡಾನೆ ಉಪಟಳಕ್ಕೆ ಭಯಭೀತರಾದ ಗ್ರಾಮಸ್ಥರು

ಕಾಡುಪ್ರಾಣಿಗಳು ಬರದಂತೆ ತಡೆಗಟ್ಟಲು ಅರಣ್ಯಾಧಿಕಾರಿಗಳಿಗೆ ಆಗ್ರಹ

• **ಕನ್ನಡಪ್ರಭ ವಾರ್ತೆ** ಹನೂರು

ತಾಲೂಕಿನ ಚಂಗಡಿ ಗ್ರಾಮದಲ್ಲಿ ಪ್ರತಿನಿತ್ಯ ಹಾಡಹಗಲೇ ಕಾಡಾನೆಯೊಂದು ದಾಂಧಲೆ ನಡೆಸುತ್ತಿರುವುದರಿಂದ ಜನರು ಭಯಭೀತರಾಗಿದ್ದಾರೆ. ಕುರಟ್ಟಿ ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ದಟ್ಟಾರಣ್ಯದ ಮಧ್ಯದಲ್ಲಿರುವ ಚಂಗಡಿ ಗ್ರಾಮಕ್ಕೆ ಬಂದು ದಿನನಿತ್ಯ ಸಂಜೆ ವೇಳೆ ಒಂಟಿ ಕಾಡಾನೆ ಉಪಟಳ ನಡೆಸುತ್ತಿದೆ.

ಅರಣ್ಯಾಧಿಕಾರಿಗಳ ವೈಫಲ್ಯವೆಂದ ಗ್ರಾಮಸ್ಥರು: ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಮಹದೇಶ್ವರ ಬೆಟ್ಟ ವಲಯ ವ್ಯಾಪ್ತಿಗೆ ಬರುವ ಚಂಗಡಿ ಗ್ರಾಮದಲ್ಲಿ 250ಕ್ಕೂ ಹೆಚ್ಚು ಕುಟುಂಬಗಳಿದ್ದು, ಗ್ರಾಮ ಅರಣ್ಯ ಪ್ರದೇಶದ ಮಧ್ಯ ಭಾಗದಲ್ಲಿ ಇರುವುದರಿಂದ ಇಲ್ಲಿನ ನಿವಾಸಿಗಳು ಉದ್ಯೋಗಕ್ಕಾಗಿ ನೆರೆಯ ತಮಿಳುನಾಡು, ಬೆಂಗಳೂರು ಸೇರಿ ವಿವಿಧ ಕಡೆ ಕೆಲಸ- ಕಾರ್ಯಗಳಿಗೆ ತೆರಳಿರುವುದರಿಂದ ಇಲ್ಲಿನ ಹಿರಿಯ ನಾಗರಿಕರು ಮಾತ್ರ ಗ್ರಾಮದಲ್ಲಿ ಉಳಿಯುತ್ತಿದ್ದು, ಕಾಡುಪ್ರಾಣಿಗಳಾದ ಚಿರತೆ, ಕಾಡಾನೆಗಳ ಉಪಟಳದಿಂದ ಜೀವ ಭಯ ಹೆಚ್ಚಾಗಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಸಂಬಂಧಪಟ್ಟ ಅರಣ್ಯ ಇಲಾಖೆ ಅಧಿಕಾರಿಗಳು ಕಾಡುಪ್ರಾಣಿಗಳನ್ನು ಗ್ರಾಮಕ್ಕೆ ಬರುವುದನ್ನು ತಡೆಗಟ್ಟಲು ವಿಫಲರಾಗಿದ್ದಾರೆ ಎಂದು ನಿವಾಸಿಗಳು ತಿಳಿಸಿದ್ದು, ಭಯದ ವಾತಾವರಣದಲ್ಲೇ ಕಾಲ ಕಳೆಯುವಂತಹ ಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.



ಸಂಜೆ ಆಗುತ್ತಿದ್ದಂತೆ ಕಾಡಾನೆ ಉಪಟಳ: ಚಂಗಡಿ ಗ್ರಾಮದ ಬಳಿ ಒಂಟಿ ಕಾಡಾನೆ ಹಾಡಹಗಲೇ ಬರುತ್ತಿರುವುದರಿಂದ ಅಲ್ಲಿನ ಮರಗಳಲ್ಲಿರುವ ಹಲಸು, ತೆಂಗು, ಮಾವಿನ ಹಣ್ಣುಗಳನ್ನು ತಿಂದು ಹಾಳು ಮಾಡುತ್ತಿದೆ, ನಿತ್ಯವೂ ಉಪಟಳ ನೀಡುತ್ತಿರುವ ಒಂಟಿ ಕಾಡಾನೆಯನ್ನು ಬೇರಡೆ ಬಿಡಲು ಅರಣ್ಯ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ನಿವಾಸಿಗಳು ಒತ್ತಾಯಿಸಿದ್ದಾರೆ.

ರಸ್ತೆ ಅಪಘಾತದಲ್ಲಿ ಪಾದಚಾರಿ ಸಾವು

ಯಳಂದೂರು: ತಾಲೂಕಿನ ಮೆಳ್ಳಹಳ್ಳಿ ಗೇಟ್ ಬಳಿ ಇರುವ ಪೆಟ್ರೋಲ್ ಬಂಕ್ ಬಳಿ ರಾಷ್ಟ್ರೀಯ ಹೆದ್ದಾರಿ 948 ರಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಪಾದಚಾರಿಯೊಬ್ಬರುಮೃತಪಟ್ಟಿರುವಘಟನೆಭಾನುವಾರ ರಾತ್ರಿ ನಡೆದಿದೆ.

ತಾಲೂಕಿನ ಕಂದಹಳ್ಳಿ ಗ್ರಾಮದ ಸಿದ್ದರಾಜು(45) ಎಂಬುವರೇ ಮೃತಪಟ್ಟ ದುರ್ದೈವಿಯಾಗಿದ್ದಾರೆ. ಇವರು ಸಮೀಪದ ಸಂತೆಮರಹಳ್ಳಿಯಲ್ಲಿ ಸಂಬಂಧಿಕರ ಮದುವೆ ಮುಗಿಸಿಕೊಂಡು ವಾಪಸ್ಸು ನಡೆದುಕೊಂಡೇ ಗ್ರಾಮಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಇವರ ಹಿಂಬದಿಯಿಂದ ಬಂದ ಬೈಕ್ ಜೋರಾಗಿ ಗುದ್ದಿದ ಪರಿಣಾಮ ಮೃತಪಟ್ಟಿದ್ದಾರೆ. ಈ ಸಂಬಂಧ ಸಂತೆಮರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಮುಂದಿನ ಕ್ರಮ ವಹಿಸಿದ್ದಾರೆ.

ರಸ್ತೆ ದಿಬ್ಬ ನಿರ್ಮಿಸಲು ಮನವಿ:

ತಾಲೂಕಿನ ಮೆಳ್ಳಹಳ್ಳಿ ಗೇಟ್ ಹಾಗೂ ಪಟ್ಟಣದ ಅರಣ್ಯ ಇಲಾಖೆ ಕಚೇರಿಯ ಸರ್ಕಲ್‌ಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ರಸ್ತೆ ದಿಬ್ಬ ನಿರ್ಮಿಸಿಲ್ಲ. ಇಲ್ಲಿ ಆಗಾಗ ರಸ್ತೆ ಅಪಘಾತಗಳು ಸಂಭವಿಸುತ್ತಲೇ ಇರುತ್ತವೆ. ಹಾಗಾಗಿ ಇಲ್ಲಿ ರಸ್ತೆ ಉಬ್ಬು ನಿರ್ಮಿಸಬೇಕು ಎಂದು ಹಲವು ಬಾರಿ ಮನವಿ ನೀಡಿದರೂ ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಪುರಸ್ಕರಿಸಿಲ್ಲ ಎಂಬುದು ಸಾರ್ವಜನಿಕರ ದೂರಾಗಿದ್ದು, ಆದಷ್ಟು ಬೇಗ ಇಲ್ಲಿ ರಸ್ತೆ ದಿಬ್ಬ ನಿರ್ಮಿಸಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ.

ಹನೂರು: ಬೇಟೆಗಾರನ ಬಂಧನ

ಹನೂರು: ಕರ್ನಾಟಕ- ತಮಿಳುನಾಡು ಗಡಿಭಾಗದಲ್ಲಿ ಜಿಂಕೆ ಬೇಟೆಯಾಡಿ ಮಾಂಸವನ್ನು ಬೈಕ್ ನಲ್ಲಿ ಸಾಗಿಸುತ್ತಿದ್ದ ವೇಳೆ ಅರಣ್ಯ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ ವ್ಯಕ್ತಿಯೋರ್ವನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಾಲೂಕಿನ ಜಲ್ಲಿಪಾಳ್ಯ ಗ್ರಾಮದ ಕನಕರಾಜು (46) ಬಂಧಿತ ಆರೋಪಿ. ತಮಿಳುನಾಡು- ಕರ್ನಾಟಕ ಅರಣ್ಯ ಗಡಿ ಪ್ರದೇಶದಲ್ಲಿ ವ್ಯಕ್ತಿಯೋರ್ವ ಜಿಂಕೆ ಮಾಂಸವನ್ನು ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ಹೂಗ್ಯಂ ವಲಯ ಅರಣ್ಯ ಅಧಿಕಾರಿಗಳ ತಂಡ ದಾಳಿ ನಡೆಸಿ, ವ್ಯಕ್ತಿ ಹಾಗೂ ಮಾಂಸ ಸಾಗಾಣಿಕೆಗೆ ಬಳಸಿದ್ದ ಬೈಕ್ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ಪ್ರಕರಣದಲ್ಲಿ ಭಾಗಿಯಾಗಿದ್ದ ಜಲ್ಲಿ ಪಾಳ್ಯ ಗ್ರಾಮದ ಮಾರಿಕಣ್ಣು ಹಾಗೂ ಪೇರಿಸ್ವಾಮಿ ಸ್ಥಳದಿಂದ ಕಾಲ್ಕಿತ್ತಿದ್ದು ಅವರ ಪತ್ತೆಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಶೋಧಕಾರ್ಯ ಆರಂಭಿಸಿದ್ದಾರೆ. ಹೂಗ್ಯಂ ವಲಯ ಅರಣ್ಯ ಅಧಿಕಾರಿಯಾದ ಜಿತೇಂದ್ರ, ಉಪ ವಲಯ ಅರಣ್ಯ ಅಧಿಕಾರಿಗಳಾದ ಗಿರೀಶ್, ಶ್ರೀಧರ್, ಅರಣ್ಯ ರಕ್ಷಕರಾದಪುಂಡಲೀಕ, ಅನಿಲ್, ಶರವಣ, ಪೆರುಮಾಳ್, ರಾಜುಇದ್ದರು.

ಇಂದು ನೌಕರರ ಕಾಲ್ನಡಿಗೆ ಜಾಥಾ

ಗುಂಡ್ಲುಪೇಟೆ: ಕಳೆದ 5 ದಿನಗಳಿಂದ ಬಂಡೀಪುರ ಸಫಾರಿ ಕೇಂದ್ರದ ಆವರಣದಲ್ಲಿ ರಾಜ್ಯ ಅರಣ್ಯ ವನ್ಯಜೀವಿ ಘಟಕಗಳ ದಿನಗೂಲಿ ಹೊರ ಗುತ್ತಿಗೆ ನೌಕರರ ಸಂಘ ಅಹೋರಾತ್ರಿ ಮುಷ್ಕರ ನಡೆಸುತ್ತಿದ್ದರೂ, ಸರ್ಕಾರ ಹಾಗೂ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಮೇ 5ರಂದು ಬಂಡೀಪುರ ಸಫಾರಿ ಕೇಂದ್ರದಿಂದ ಮೇಲುಕಾಮನಹಳ್ಳಿ ಬಳಿಯ ಗೋಪಾಲಸ್ವಾಮಿ ಬೆಟ್ಟ ವಲಯ ಕಚೇರಿ ತನಕ ಕಾಲ್ನಡಿಗೆ ಜಾಥಾ ನಡೆಸಲು ನಿರ್ಧರಿಸಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಎಂ. ನಾಗರಾಜು ತಿಳಿಸಿದ್ದಾರೆ. ರಾಜ್ಯ ಅರಣ್ಯ ವನ್ಯಜೀವಿ ಘಟಕಗಳ ದಿನಗೂಲಿ ಹೊರ ಗುತ್ತಿಗೆ ನೌಕರರ ಸಮಸ್ಯೆ ಬಗೆಹರಿಸುವಂತೆ ಕಳೆದ ಏ.30ರಿಂದ ಮುಷ್ಕರ ನಡೆಸುತ್ತಿದ್ದರೂ ಸರ್ಕಾರ ಹಾಗೂ ಹಿರಿಯ ಅಧಿಕಾರಿಗಳು ಸಮಸ್ಯೆ ಬಗೆಹರಿಸಿಕೊಡಲು ಬೆಂಗಳೂರಿಗೆ ಬನ್ನಿ ಎನ್ನುತ್ತಿದ್ದಾರೆ. ಮುಷ್ಕರ ಸ್ಥಳಕ್ಕೆ ಬರುತ್ತಿಲ್ಲ ಎಂದು ಆರೋಪಿಸಿದ್ದಾರೆ. ಸರ್ಕಾರದ ನಡೆಯನ್ನು ಖಂಡಿಸಿ, ಮೇ 5 ರಂದು ಬೆಳಗ್ಗೆ 11ಕ್ಕೆ ಬಂಡೀಪುರ ಸಫಾರಿ ಕೇಂದ್ರದಿಂದ ಕಾಲ್ನಡಿಗೆ ಜಾಥಾ ಆರಂಭವಾಗಲಿದ್ದು, ನಂತರ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಲಾಗುವುದು ಎಂದಿದ್ದಾರೆ.

ಲೋಪದೋಷ | ಪಿಯುಸಿ ಮೌಲ್ಯಮಾಪಕರ ಎಡವಟ್ಟು

ಮರುಮೌಲ್ಯಮಾಪನದಲ್ಲಿ ನಿಸರ್ಗ ಕಾಲೇಜಿನ ಏಳು ವಿದ್ಯಾರ್ಥಿಗಳಿಗೆ ಹೆಚ್ಚುವರಿ ಅಂಕಗಳು

• **ಕನ್ನಡಪ್ರಭ ವಾರ್ತೆ** ಕೊಳ್ಳೇಗಾಲ

ಉತ್ತಮ ಪರೀಕ್ಷೆ ಬರೆದಿದ್ದರೂ ನಿರೀಕ್ಷಿತ ಅಂಕ ಬರದೇ ನಿರಾಶರಾಗಿದ್ದ ವಿದ್ಯಾರ್ಥಿಗಳು ಪುನಃ ಮರು ಮೌಲ್ಯಮಾಪನಕ್ಕೆ ನಿರ್ಧರಿಸಿದ್ದ ಹಿನ್ನೆಲೆ ಒಂದೇ ಕಾಲೇಜಿನ 7 ಮಂದಿಗೆ ಅಂಕಗಳಲ್ಲಿ ಭಾರೀ ಏರಿಕೆ ಕಂಡು ಬಂದಿದೆ.

ಹೌದು, ಪಿಯುಸಿ ಮೌಲ್ಯಮಾಪನದಲ್ಲಿ ಮಾಪಕರ ಎಡವಟ್ಟಿನಿಂದಾಗಿ ಸಾಕಷ್ಟು ಲೋಪ ಘಟಿಸಿದ್ದು, ಮರು ಮೌಲ್ಯಮಾಪನದಿಂದ ಬೆಳಕಿಗೆ ಬಂದಿದೆ. ಕೊಳ್ಳೇಗಾಲ ಪಟ್ಟಣದ ನಿಸರ್ಗ ವಿದ್ಯಾನಿಕೇತನದ ವಾಣಿಜ್ಯ ವಿಭಾಗದ ಅರ್ಪಿತಾಗೆ 17 ಅಂಕ, ಶ್ರೇಯಾಗೆ 5 ಅಂಕ, ವಿಜ್ಞಾನ ವಿಭಾಗದ ಅಶೋಕ್ ಗೆ 4 ಅಂಕ, ವಿದ್ಯಾರ್ಥಿ ನಿಶ್ಚಯಗೆ 3 ಅಂಕ, ಯುಕ್ತ ಮತ್ತು ಅಮೂಲ್ಯ ಅವರುಗಳಿಗೆ ತಲಾ 2 ಅಂಕ ಮತ್ತು ನೇಹಾ ಅವರಿಗೆ 5 ಅಂಕಗಳು ಮರು ಮೌಲ್ಯಮಾಪನದಿಂದ ಲಭಿಸಿದಂತಾಗಿದೆ.

ಆರ್. ಅರ್ಪಿತಾಗೆ ಇತ್ತೀಚೆಗೆ ಪಿಯು ಬೋರ್ಡ್ ಪ್ರಕಟಿಸಿದ ಫಲಿತಾಂಶದಲ್ಲಿ 570 ಅಂಕ ದೊರೆತಿದ್ದವು, ಆದರೆ ವಿದ್ಯಾರ್ಥಿನಿ ಬೇಸರಗೊಂಡು, ನಾನು ಉತ್ತಮವಾಗಿ ಪರೀಕ್ಷೆ ಬರೆದಿದ್ದೆ, ನನಗೆ ಕಡಿಮೆ ಅಂಕ ಬಂದಿದೆ ಎಂದು ಮರು ಮೌಲ್ಯಮಾಪನಕ್ಕೆ ನಿರ್ಧರಿಸಿದ ಬಳಿಕ ಆಂಗ್ಲ ಭಾಷೆಯಲ್ಲಿ 14, ಇತರೆ 3 ವಿಷಯಗಳಲ್ಲೂ 4 ಅಂಕಗಳು ಲಭಿಸಿದ್ದು ಮೊದಲು 570 ಅಂಕಗಳಿದ್ದ ವಿದ್ಯಾರ್ಥಿನಿಗೆ ಈಗ 587 ಅಂಕಗಳು ಲಭಿಸಿದ್ದು, ಜಿಲ್ಲಾ ಹಂತದ ಟಾಪ್ ಎರಡನೇ ಸ್ಥಾನಕ್ಕೆ ಭಾಜನರಾಗಿದ್ದಾರೆ. ಅದರಂತೆ ಶ್ರೇಯಾಗೆ 585 ಅಂಕ ದೊರೆತಿದ್ದು ಇನ್ನಷ್ಟು ಅಂಕ ಬರಬೇಕಿತ್ತು ಎಂದು ಮರು ಮೌಲ್ಯಮಾಪನ ಬಯಸಿದ್ದ ಹಿನ್ನೆಲೆ 5 ಅಂಕ ದೊರೆತಿದ್ದು, ಈಗ ಶ್ರೇಯಾ ಅಂಕ 590ಕ್ಕೆ ಏರಿಕೆಯಾಗಿತೃತೀಯ ಸ್ಥಾನಕ್ಕೆ ಭಾಜನರಾಗಿದ್ದಾರೆ.

ವಿಜ್ಞಾನ ವಿಭಾಗದ ನಿಶ್ಚಯಗೆ ಈ ಹಿಂದೆ 583 ಅಂಕ ದೊರೆತಿದ್ದವು, ಮರು ಮೌಲ್ಯಮಾಪನದ ನಂತರ 3 ಅಂಕ ಏರಿಕೆಯಾಗಿದ್ದು 586 ಅಂಕ ದೊರೆತಂತಾಗಿದೆ. ಅಶೋಕ್ ಎಂಬ ವಿದ್ಯಾರ್ಥಿಗೆ 582 ಅಂಕ ಲಭಿಸಿದ್ದು, ಮೌಲ್ಯಮಾಪನದ ಬಳಿಕ ಹೆಚ್ಚುವರಿ 4 ಅಂಕ ದೊರೆತು 586ಕ್ಕೆ ಅಂಕ ಏರಿಕೆ ಕಂಡಿದೆ. ಉಳಿದಂತೆ ಯುಕ್ತಾಗೆ 2 ಅಂಕ ಹೆಚ್ಚಳದಿಂದ 584 ಮತ್ತು ನೇಹಾಗೆ 5 ಅಂಕ ಹೆಚ್ಚಳದಿಂದ 580 ಅಂಕ ಲಭಿಸಿದಂತಾಗಿದ್ದು ಸಾಧಕ ಮಕ್ಕಳಿಗೆ ಸಂಸ್ಥೆಯ ಕಾರ್ಯದರ್ಶಿ ಡಾ.ದತ್ತೇಶ್ ಕುಮಾರ್, ಪ್ರಾಂಶುಪಾಲ ಕೃಷ್ಣೇಗೌಡ ಅಭಿನಂದಿಸಿದ್ದಾರೆ.


ಶ್ರೇಯ

ಅರ್ಪಿತಾ

ನಿಶ್ಚಯ

ಅಶೋಕ

ಯುಕ್ತ

ಅಮೂಲ್ಯ

ನೇಹಾ

ಶಾಲಾ ಆಡಳಿತ ಮಂಡಳಿಯಿಂದ ಸಾಧಕ ಟಾಪರ್ ವಿದ್ಯಾರ್ಥಿಗಳಿಗೆ ಅಭಿನಂದನೆಗಳು

8ರಿಂದ ರಾಮಸಮುದ್ರದಲ್ಲಿ ಶ್ರೀರಾಮಲಿಂಗ, ಚೌಡೇಶ್ವರಿ ಅಮ್ಮನವರ 47ನೇ ವರ್ಧಂತ್ಯುತ್ಸವ



ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ದೇವಾಂಗ ಜನಾಂಗದ ಮುಖಂಡ ಆರ್.ಕುಮಾರ್‌ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ನಗರದ ರಾಮಸಮುದ್ರದ ದೇವಾಂಗ ಬೀದಿಯಲ್ಲಿ ಮೇ 8ರಿಂದ 11ರವರೆಗೆ ಶ್ರೀರಾಮಲಿಂಗ, ಚೌಡೇಶ್ವರಿ ಅಮ್ಮನವರ 47ನೇ ವರ್ಷದ ವರ್ಧಂತ್ಯುತ್ಸವ ಹಾಗೂ ಕತ್ತಿ ಹಬ್ಬ ಆಯೋಜಿಸಲಾಗಿದೆ ಎಂದು ದೇವಾಂಗ ಸಮುದಾಯದ ಮುಖಂಡ ಹಾಗೂ ವರ್ಧಂತ್ಯುತ್ಸವದ ಅಧ್ಯಕ್ಷ ಆರ್. ಕುಮಾರ್‌ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 4 ದಿನಗಳ ಕಾಲ ವರ್ಧಂತ್ಯುತ್ಸವ ಹಾಗೂ ಕತ್ತಿ ಹಬ್ಬನಡೆಯಲಿದ್ದು, ವಿವಿಧ ಪೂಜಾ ಕೈಂಕರ್ಯಗಳು ನೆರವೇರಲಿವೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗಬೇಕು ಎಂದು ತಿಳಿಸಿದರು.

ಮೇ 8ರಂದು ಶ್ರೀರಾಮಲಿಂಗ- ಚೌಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಶ್ರೀಗಣಪತಿ ಧ್ಯಾನ, ಏಕವಾರ ರುದ್ರಾಭಿಷೇಕ, ಅನುಜ್ಞೆ ನಂತರ ಮಹಾ ಮಂಗಳಾರತಿ, 9ರಂದು ವಿವಿಧ ಪೂಜಾ ಕೈಂಕರ್ಯಗಳು, ಅಭಿಷೇಕ ನಂತರ ಮಧ್ಯಾಹ್ನ 12.30ಕ್ಕೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದರು. 10ರಂದು ವಿವಿಧ ಪೂಜಾ ಕೈಂಕರ್ಯಗಳು ಬಳಿಕ ದೇವಾಂಗ ಬೀದಿಗಳಲ್ಲಿ ಅಲಗು ಸೇವೆ ನಂತರ ಮಹಾ ಮಂಗಳಾರತಿ, 11ರಂದು ದೇವಾಂಗ ಬೀದಿಗಳಲ್ಲಿ ವಸಂತ್ಯುತ್ಸವ ಮಹಾಭಿಷೇಕ, ಮಹಾಮಂಗಳಾರತಿ, ಆಶೀರ್ವಚನ ನಂತರ ಅನ್ನಸಂತರ್ಪಣೆ, ಸಂಜೆ ಶ್ರೀಅಮ್ಮನವರ ಕುಲಸ್ಥರಿಂದ ತಂಪುಸೇವೆ, ಮಹಾ ಮಂಗಳಾರತಿ, ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ನಟರಾಜು, ಉಮೇಶ್, ಶ್ರೀಧರ್, ಗೋವಿಂದ, ಸುಂದರ್, ಕೃಷ್ಣ, ಅರ್ಚಕರಾದ ಮಂಜುನಾಥ್ ಇದ್ದರು.

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಪ್ರಚಂಡ ಜಯಭೇರಿ: ಕಾರ್ಯಕರ್ತರ ವಿಜಯೋತ್ಸವ

• **ಕನ್ನಡಪ್ರಭ ವಾರ್ತೆ** ಚಾಮರಾಜನಗರ

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಪ್ರಚಂಡ ಗೆಲುವು ಸಾಧಿಸಿದ್ದರಿಂದ ನಗರದಲ್ಲಿ ಬಿಜೆಪಿ ವತಿಯಿಂದ ವಿಜಯೋತ್ಸವ ಆಚರಣೆ ಮಾಡಲಾಯಿತು.

ಶ್ರೀಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು, ಮುಖಂಡರು ಅಲ್ಲಿಂದ ಮೆರವಣಿಗೆಯಲ್ಲಿ ಭುವನೇಶ್ವರಿ ವೃತ್ತಕ್ಕೆ ತೆರಳಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ಪರ ಜೈಕಾರ ಕೂಗಿ ಸಂಭ್ರಮಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ. ವೃಷಭೇಂದ್ರಪ್ಪ ಮಾತನಾಡಿ, ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸುವ ಮೂಲಕ ಅಧಿಕಾರ ಹಿಡಿದಿರುವುದು ತುಂಬಾ ಸಂತಸವಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನಪರ ಆಡಳಿತ ಒಪ್ಪಿ ಜನತೆ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕುವ ಮೂಲಕ ಅಧಿಕಾರಕ್ಕೆ ತಂದಿದ್ದಾರೆ. ಈ ಮೂರು ರಾಜ್ಯ ಫಲಿತಾಂಶ ಕರ್ನಾಟಕ ರಾಜ್ಯದ ಮುಂದಿನ ಚುನಾವಣೆಯ ದಿಕ್ಸೂಚಿಯಾಗಿದೆ ಎಂದರು.

ಯುವ ಮೋರ್ಚಾದ ಅಧ್ಯಕ್ಷ ಸೂರ್ಯಕುಮಾರ್ ಮಾತನಾಡಿ, ದೇಶದ ಜನ ಹಿಂದುತ್ವ ಕಡೆ ಸಾಗುತ್ತಿದ್ದಾರೆ ಎನ್ನುವುದಕ್ಕೆ ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಒಂದು ಸಾಕ್ಷಿಯಾಗಿದೆ, ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಬಿಜೆಪಿಗೆ ದೊಡ್ಡ ಗೆಲುವು ಆಗಿದೆ. ಅದೇ ರೀತಿ ಅಸ್ಸಾಂ, ಪುದುಚೇರಿಯಲ್ಲೂ ಬಿಜೆಪಿ ಅಧಿಕಾರ ಹಿಡಿದಿದೆ. ತಮಿಳುನಾಡಿನಲ್ಲಿ ಹಿಂದುತ್ವದ ವಿರುದ್ಧವಿದ್ದ ಡಿಎಂಕೆಗೆ ಜನರು ಸೋಲಿನ ರುಚಿ ತೋರಿಸಿದ್ದಾರೆ, ದೇಶದ ಜನರು ಸುಭದ್ರ ಆಡಳಿತ, ರಕ್ಷಣೆಗೆ ಹೆಚ್ಚು ಒತ್ತು ನೀಡಿದ್ದಾರೆ ಎಂದರು.

ಸಂಭ್ರಮಾಚರಣೆಯಲ್ಲಿ ಭಾರತೀಯ ಜನತಾ ಪಾರ್ಟಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಎ.ಬಾಬು, ರಾಷ್ಟ್ರೀಯ ಓಬಿಸಿ ಮೋರ್ಚಾದ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಚೂಡಾ ಮಾಜಿ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ಉಪಾಧ್ಯಕ್ಷ ಶಿವುವಿರಾಟ್, ಸಾಹಿತಿ ಮಂಜುಕೋಡಿ ಉಗನೆ, ಎಪಿಎಂಸಿ ಮಾಜಿ ಅಧ್ಯಕ್ಷ

ಮನೋಜ್ ಪಟೇಲ್, ಯುವಮೋರ್ಚಾದ ಪ್ರಧಾನ ಕಾರ್ಯದರ್ಶಿ ಆನಂದ್ ಭಗೀರಥ, ಬಂಗಾರನಾಯಕ, ಶಿವಣ್ಣ, ಮಂಜು, ಕೂಸಣ್ಣ, ಮಹೇಶ್, ಕೇಬಲ್ ರಂಗಸ್ವಾಮಿ, ಶೇಷಪ್ಪಾ ಪಾಸ್ವಾನ್, ವಿ. ಶ್ರೀನಿವಾಸಪ್ರಸಾದ್, ಸೋಮವಾರಪೇಟೆ ಗುರು, ಪೋಟೋಕೃಷ್ಣ, ಭೋಗಾಪುರ ಕುಮಾರ್, ಕೃಷ್ಣಪ್ಪ, ಪ್ರವೀಣ್ ನಾಯಕ್, ಕೃಷ್ಣಕುಮಾರ್, ಚಂದ್ರಶೇಖರ್, ಪರಶಿವು ಹಾಜರಿದ್ದರು.



ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಭಾರತೀಯ ಜನತಾ ಪಾರ್ಟಿ ಪ್ರಚಂಡ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಚಾಮರಾಜನಗರದಲ್ಲಿ ಬಿಜೆಪಿ ಕಾರ್ಯಕರ್ತರ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು.

ಗುಂಡ್ಲುಪೇಟೆಯಲ್ಲಿ ಸಂಭ್ರಮಾಚರಣೆ



ಗುಂಡ್ಲುಪೇಟೆಯಲ್ಲಿ ಬಿಜೆಪಿ ಕಾರ್ಯಕರ್ತರು ಪಂಚ ರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆ ವಿಜಯೋತ್ಸವ ಆಚರಿಸಿದರು.

ಗುಂಡ್ಲುಪೇಟೆ: ಪಂಚರಾಜ್ಯಗಳಿಗೆ ನಡೆದ ವಿಧಾನಸಭೆ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ ಭಾರಿಸಿದ ಹಿನ್ನೆಲೆ ಪಟ್ಟಣದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಹಾಗೂ ಮಾಜಿ ಶಾಸಕ ಸಿ.ಎಸ್ .ನಿರಂಜನ್ ಕುಮಾರ್ ನೇತೃತ್ವದಲ್ಲಿ ವಿಜಯೋತ್ಸವ ಆಚರಿಸಲಾಯಿತು. ಪಟ್ಟಣದ ಎಂಸಿಡಿಸಿಸಿ ಬ್ಯಾಂಕ್ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿದ ಬಳಿಕ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿಗೆ ಜೈಕಾರ ಹಾಕಿದರು.

ವಿಜಯೋತ್ಸವದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ. ಎಸ್.ನಿರಂಜನ್ ಕುಮಾರ್ ಮಾತನಾಡಿ, ಪಂಚ ರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಪುದುಚೇರಿ, ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿಗೆ ಸ್ಪಷ್ಟ ಬಹುಮತ ಬಂದಿದೆ ಎಂದರು.

ಮೂರು ರಾಜ್ಯಗಳಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸಿ ಸೋತಿದೆ, ಅಲ್ಲದೆ ದೇಶದಲ್ಲಿ ತನ್ನ ಅಸ್ತಿತ್ವ ಕಳೆದುಕೊಳ್ಳುತ್ತಿದೆ. ಕಾಂಗ್ರೆಸ್ ಅಧಿಕಾರ ನಡೆಸುತ್ತಿರುವ ರಾಜ್ಯಗಳಲ್ಲಿ ಒಂದೊಂದಾಗಿ ಅಧಿಕಾರ ಕಳೆದುಕೊಳ್ಳುತ್ತಿದೆ ಎಂದರು.

ಎಲ್ಲಕ್ಕಿಂತ ಮುಖ್ಯವಾಗಿ ಪಶ್ಚಿಮ ಬಂಗಾಳದಲ್ಲಿ ಭದ್ರತೆ, ಸುರಕ್ಷತೆ ದೃಷ್ಟಿಯಿಂದ ಅಲ್ಲಿನ ಮತದಾರರು ಬಿಜೆಪಿ ಬೆಂಬಲಿಸಿದ್ದಾರೆ. ಪ್ರಧಾನ ಮಂತ್ರಿಗಳ ಜನಪರ ಕೆಲಸಗಳಿಗೆ ಮತದಾರ ಕೈ ಹಿಡಿದಿದ್ದಾನೆ ಎಂದರು.

ವಿಜಯೋತ್ಸವದಲ್ಲಿ ಮಂಡಲ ಬಿಜೆಪಿ ಅಧ್ಯಕ್ಷ ಸಿ.ಮಹದೇವಪ್ರಸಾದ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಕನ್ನೇಗಾಲ ಸ್ವಾಮಿ, ಪುರಸಭೆ ಮಾಜಿ ಅಧ್ಯಕ್ಷ ಎಲ್. ಸುರೇಶ್, ಮಂಡಲ ಪ್ರಧಾನ ಕಾರ್ಯದರ್ಶಿ ಸುನೀಲ್, ಮಹೇಂದ್ರ, ಹಾಪ್ ಕಾಮ್ಸ್ ಅಧ್ಯಕ್ಷ ಕೆ. ಆರ್.ಲೋಕೇಶ್, ಪುರಸಭೆ ಮಾಜಿ ಸದಸ್ಯ ನಾಗೇಶ್, ಮುಖಂಡರಾದ ಕೊಡಸೋಗೆ ಶಿವಪ್ರಕಾಶ್, ಕಲ್ಲಹಳ್ಳಿ ಮಹೇಶ್, ಮಾಡಹಳ್ಳಿ ನಾಗೇಂದ್ರ, ಕೆ.ಎಸ್.ರೇವಣ್ಣ, ಹಂಗಳಪುರ ರೇವಣ್ಣ, ನಾಗೇಶ್, ಎಸ್.ಸಿ.ಮಂಜುನಾಥ್, ಹನುಮಂತ ಶೆಟ್ಟಿ, ದೇವರಹಳ್ಳಿ ಮಹೇಶ್, ಶಿವಪುರ ಮಂಜು, ಅಂಕಹಳ್ಳಿ ಮಹೇಂದ್ರ, ಬನ್ನಿತಾಳಪುರ ಮಹೇಶ್, ಕಬ್ಬಹಳ್ಳಿ ಮಹೇಶ್ ಸೇರಿದಂತೆ ಹಲವರಿದ್ದರು.

ಕೊಳ್ಳೇಗಾಲದಲ್ಲಿ ಪಟಾಕಿ ಸಿಡಿಸಿ ಬಿಜೆಪಿಗರ ಸಂಭ್ರಮ



ದೇಶದ ಪಂಚರಾಜ್ಯ ಚುನಾವಣೆಯಲ್ಲಿ ಮೂರು ರಾಜ್ಯಗಳಲ್ಲಿ ಭಾರತೀಯ ಜನತಾ ಪಾರ್ಟಿ ಜಯಭೇರಿ ಗಳಿಸಿದ್ದ ಹಿನ್ನೆಲೆ ಕೊಳ್ಳೇಗಾಲ ಪಟ್ಟಣದ ಮಸೀದಿ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ತಿನ್ನಿಸುವ ಮೂಲಕ ಸಂಭ್ರಮಿಸಿದರು.

• **ಕನ್ನಡಪ್ರಭ ವಾರ್ತೆ** ಕೊಳ್ಳೇಗಾಲ

ದೇಶದ ಪಂಚರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಭಾರತೀಯ ಜನತಾ ಪಾರ್ಟಿ ಜಯಭೇರಿ ಗಳಿಸಿದ್ದ ಹಿನ್ನೆಲೆ ಇಲ್ಲಿನ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ಪಟ್ಟಣದ ಮಸೀದಿ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ತಿನ್ನಿಸುವ ಮೂಲಕ ಸಂಭ್ರಮಿಸಿದರು.

ಈ ವೇಳೆ ಬಿಜೆಪಿ ನಗರ ಮಂಡಲ ಎಂ.ಶಿವಕುಮಾರ್ ಮಾತನಾಡಿ, ದೇಶದ ಪಂಚರಾಜ್ಯ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿಯ ಮೇಲೆ ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಪುದುಚೇರಿ ರಾಜ್ಯಗಳಲ್ಲಿ ಅಮೋಘ ಜಯ ಗಳಿಸಲು ಕಾರಣರಾದ ಜನರಿಗೆ ಧನ್ಯವಾದಗಳು ಸಲ್ಲಿಸುತ್ತೇವೆ. ಇದೇ ರೀತಿ ರಾಜ್ಯದಲ್ಲೂ ಸಹ ಮುಂದಿನ ದಿನಗಳಲ್ಲಿ ಮತದಾರರು ಬಿಜೆಪಿಯನ್ನು ಅಧಿಕಾರಕ್ಕೆ ತರಲು ಶ್ರಮಿಸಲಿದ್ದಾರೆ ಎಂದು ತಿಳಿಸಿದರು.

ಸಂಭ್ರಮಾಚರಣೆಯಲ್ಲಿ ಭಾರತೀಯ ಜನತಾ ಪಾರ್ಟಿ ರಾಜ್ಯ ಕಾರ್ಯಕಾರಣಿ ಸದಸ್ಯ ಶಂಕರ್, ನಗರ ಮಂಡಲ ಮಾಜಿ ಅಧ್ಯಕ್ಷ ರಮೇಶ್ ಮುರಾರಿ, ಮುಖಂಡರು ಮಧುಚಂದ್ರ, ರಾಜಶೇಖರ್, ವಕೀಲ ಬಸವರಾಜು, ಕೆ.ಕೆ ಮೂರ್ತಿ, ಕಿರಣ್, ಭಾರತೀಯ ಜನತಾ ಪಾರ್ಟಿ ಯುವ ಮೋರ್ಚಾ ಅಧ್ಯಕ್ಷ ಆನಂದ್, ರಾಜೇಶ್, ಚೇತನ್, ನಾಗಣ್ಣ, ಸೋಮಣ್ಣ, ಶೇಷಮೂರ್ತಿ, ಶಿವಮ್ಮ, ಬಾಲಾಜಿ, ಪ್ರಸಾದ್, ಹೇಮಣ್ಣ, ರವಿ, ಪ್ರಸಾದ, ಮಂಜು, ಅಣಗಳ್ಳಿ ಬಸವರಾಜು, ಚಂದ್ರಶೇಖರ್, ಮಹದೇವ್, ಚಿಂಗಾರಿ ಪರಮೇಶ್, ರತ್ನವೇಲು, ನಂಜುಂಡನಾಯಕ, ಪರಶಿವ, ಸತೀಶ, ಚಂದು, ಹಾಗೂ ಹಲವು ಬಿಜೆಪಿ ಕಾರ್ಯಕರ್ತರು ಇದ್ದರು.

ಹನೂರಿನಲ್ಲಿ ನಟ ದಳಪತಿ ವಿಜಯ್ ಕಟೌಟ್ ನಿರ್ಮಿಸಿ ಅಭಿಮಾನಿಗಳ ಸಂಭ್ರಮ

• **ಕನ್ನಡಪ್ರಭ ವಾರ್ತೆ** ಹನೂರು

ತಮಿಳುನಾಡಿನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಟಿವಿಕೆ ಪಕ್ಷ ಅಧಿಕಾರ ಗದ್ದುಗೆ ಹಿಡಿಯುತ್ತಿದ್ದಂತೆ ಪಟ್ಟಣದಲ್ಲಿ ವಿಜಯ್ ಅಭಿಮಾನಿಗಳು ಪಟಾಕಿ ಸಿಡಿಸಿ ಕಟೌಟ್ ನಿರ್ಮಾಣ ಮಾಡಿ ಸಂಭ್ರಮಿಸಿದರು. ಪಟ್ಟಣದ ಅನ್ನಪೂರ್ಣ ಹೋಟೆಲ್ ಮುಂಭಾಗ ಟಿವಿಕೆ ಪಕ್ಷದ ಮುಖಂಡ, ದಳಪತಿ ವಿಜಯ್ ಅವರ ಅಭಿಮಾನಿ, ಅನ್ನಪೂರ್ಣ ಹೋಟೆಲ್ ಮಾಲೀಕ ನಿರಂಜನ್ ನೇತೃತ್ವದಲ್ಲಿ ಹಲವು ಅಭಿಮಾನಿಗಳು, ವಿಜಯ್ ಅವರ 15 ಅಡಿ ಕಟೌಟ್ ಅಳವಡಿಸಿ, ಹಾರ ತುರಾಯಿ ಹಾಕಿ, ಸಿಹಿ ಹಂಚಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ನಂತರ ಮಾತನಾಡಿದ ನಿರಂಜನ್, ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ನಟ ವಿಜಯ್ ಟಿವಿಕೆ ಪಕ್ಷದ ಮೂಲಕ ಅಲ್ಲಿನ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳನ್ನು ಬಗ್ಗುಬಡಿದು ನೂರರ ಗಡಿ ದಾಟುವ ಮೂಲಕ ಅಭ್ಯರ್ಥಿಗಳನ್ನು ಗೆಲ್ಲಿಸಿದರು, ಈ ಹಿಂದೆ ಸಿನಿಮಾ ಹಿನ್ನೆಲೆಯ 1967ರಲ್ಲಿ ಅಣ್ಣಾದೊರೈ ಹಾಗೂ 1977ರಲ್ಲಿ ತಮಿಳು ನಟಸಾರ್ವಭೌಮ ಎಂಜಿಆರ್‌ಸಹ 130 ಸ್ಥಾನಗಳನ್ನು ಪಡೆಯುವ ಮೂಲಕ ಮೊದಲ ಬಾರಿಗೆ ತಮಿಳುನಾಡಿನಲ್ಲಿ ಅಧಿಕಾರದ ಗದ್ದುಗೆ ಏರಿದ್ದರು. ನಂತರ ಸಿನಿಮಾ ಹಿನ್ನೆಲೆಯ ಜಯಲಲಿತಾ ಸಹ ಅಧಿಕಾರ ಹಿಡಿದು ತಮಿಳುನಾಡಿನ ಮುಖ್ಯಮಂತ್ರಿ ಆಗಿ ಸೇವೆ ಸಲ್ಲಿಸಿದ್ದರು, ಪ್ರಸ್ತುತ ವಿಜಯ್ ಅವರು ಎಂಜಿಆರ್‌ಹಾದಿಯಲ್ಲಿಯೇ ಟಿವಿಕೆ ಪಕ್ಷದ ಮೂಲಕ ತಮಿಳುನಾಡಿನ ಅಧಿಕಾರದ ಗದ್ದುಗೆಏರಿರುವುದರಿಂದಸಂಭ್ರಮಾಚರಣೆ ನಡೆಸಲಾಗಿದೆ ಎಂದು ಹೇಳಿದರು.ಈ ವೇಳೆ ನಟ ವಿಜಯ್ ಅವರ ಹಲವಾರು ಅಭಿಮಾನಿಗಳು ಭಾಗಿಯಾಗಿದ್ದರು.



ತಮಿಳುನಾಡಿನಲ್ಲಿ ಟಿವಿಕೆ ಪಕ್ಷ ಬಹುಮತ ಪಡೆದ ಹಿನ್ನಲೆ ಹನೂರು ಅನ್ನಪೂರ್ಣ ಹೋಟೆಲ್ ಮಾಲೀಕ ನಿರಂಜನ್ ಮತ್ತು ಅಭಿಮಾನಿಗಳು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಐಟಿಐ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ

ಚಾಮರಾಜನಗರ: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2026-27ನೇ ಸಾಲಿನ ಪ್ರವೇಶಕ್ಕಾಗಿ ಲಭ್ಯವಿರುವ ಸ್ಥಾನಗಳಿಗೆ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಒಂದು ವರ್ಷದ ಅವಧಿಯ ಇಂಡಸ್ಟ್ರಿಯಲ್ ರೊಬೋಟಿಕ್ಸ್ ಆ್ಯಂಡ್ ಡಿಜಿಟಲ್ ಮ್ಯಾನುಫ್ಯಾಕ್ಚರಿಂಗ್ ಟೆಕ್ನಿಷಿಯನ್ (ಐಆರ್‌ಮತ್ತು ಡಿಎಂ), ಎಂಜಿನಿಯರಿಂಗ್ ಡಿಸೈನ್ ಟೆಕ್ನಿಷಿಯನ್ (ಇಡಿಟಿ), ಮ್ಯಾನುಫ್ಯಾಕ್ಚರಿಂಗ್ ಪ್ರೋಸೆಸ್ ಕಂಟ್ರೋಲ್ ಆ್ಯಂಡ್ ಆಟೋಮೆಷನ್ (ಎಂಪಿಸಿಎ) ಕೋರ್ಸ್‌ಗಳು ಹಾಗೂ ಎಲೆಕ್ಟ್ರಿಷಿಯನ್ (ಇಎನ್), ಫಿಟ್ಟರ್, ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್- ಎಂಇವಿ, ಸಿಎನ್‌ಸಿ ಮೆಷನಿಂಗ್ ಟೆಕ್ನಿಷಿಯನ್ ಸಿಎನ್‌ಸಿ, ವರ್ಚುವಲ್ ಅನಾಲಿಸಿಸ್ ಆ್ಯಂಡ್ ಡಿಸೈನರ್ (ವಿಎಡಿ) ಕೋರ್ಸ್‌ಗಳು ಎರಡು ವರ್ಷದ ಅವಧಿಯದ್ದಾಗಿವೆ. ಅಭ್ಯರ್ಥಿಗಳು ಅರ್ಜಿಯನ್ನು ಇಲಾಖೆಯ ವೆಬ್‌ಸೈಟ್ ಗಗಗ್ಱಜಿ೦ಥಿ.ಃಚ್ಞಚಿಆಚಿ.ಜಟಡ.ಜ್ಞಿ ಮೂಲಕ ಸ್ವತಃ ಅಥವಾ ಸಂಸ್ಥೆಯ ಹೆಲ್ಪ್ ಡೆಸ್ಕ್ ಮೂಲಕ ಮೇ 8 ರೊಳಗೆ ಸಲ್ಲಿಸಬಹುದು. ಮಹಿಳಾ ಅಭ್ಯರ್ಥಿಗಳಿಗೆ ಉಚಿತವಾಗಿ ಪ್ರವೇಶ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 9980895590, 9964706148 ಸಂಪರ್ಕಿಸುವಂತೆ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಚ್ಚರಿಕೆ

ಈ ಅಂಕಣಗಳಲ್ಲಿ ಜಾಹೀರಾತುಗಳಿಗೆ ಪ್ರತಿಸ್ಪಂದಿಸುವಾಗ ಸಮುಚಿತ ರೀತಿಯಲ್ಲಿ ವಿಚಾರಿಸುವಂತೆ ವಾಚಕರಿಗೆ ಸಲಹೆ ಕೊಡಲಾಗಿದೆ. ಕನ್ನಡಪ್ರಭ ಪಬ್ಲಿಕೇಷನ್ಸ್ ಲಿಮಿಟೆಡ್ ಜಾಹೀರಾತುದಾರರಿಂದ ಮಾಡಲಾದ ಯಾವುದೇ ಕ್ಲೇಮುಗಳಿಗೆ ಹೊಣೆಯಾಗಿರುವುದಿಲ್ಲ.
ಮುದ್ರಕ, ಪ್ರಕಾಶಕ, ಸಂಪಾದಕ ಮತ್ತು ಮಾಲೀಕರು ಕನ್ನಡಪ್ರಭ ಪಬ್ಲಿಕೇಷನ್ಸ್ ಲಿಮಿಟೆಡ್ ಇವರು ಅಂತಹ ಕ್ಲೇಮುಗಳು ಅಸತ್ಯವೆಂದು ಕಂಡುಬಂದಲ್ಲಿ ಯಾವುದೇ ಪರಿಣಾಮಗಳಿಗೆ ಜವಾಬ್ದಾರಿ/ಹೊಣೆಯಾಗಿರತಕ್ಕುದಲ್ಲ.
ಕನ್ನಡಪ್ರಭ

IN THE SUPREME COURT OF INDIA EXTRA-ORDINARY APPELLATE JURISDICTION
Petition for Special Leave to Appeal (Civil) No(s) 30025-30028 OF 2024 WITH PRAYER FOR INTERIM RELIEF

HARISH KUMAR (DEAD) BY LRS AND OTHERS ....Petitioner(s)
VERSUS
THE STATE OF KARNATAKA AND OTHERS ....Respondent(s)

To,

1 **SRI.DALI MUNIYAPPA,** AGED ABOUT 65 YEARS, S/O MUNI OBALAPPA, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU -560110. KARNATAKA.	**PID: 98100/2026 FOR R[19] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
2 **SMT.B.V. RATHNAMMA,** AGED ABOUT 60 YEARS, D/O LATE VENKATARAMAIAH, R/A NO.33, 12TH E CROSS, MAGADI ROAD, BENGALURU-560023., KARNATAKA.	**PID: 98101/2026 FOR R[21] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
3 **SRI.H.CHANDRAKEERTHI,** AGED ABOUT 41 YEARS, S/O LATE HANUMAIAH, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU-560110, KARNATAKA	**PID: 98102/2026 FOR R[24] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
4 **SMT.PARVATHAMMA,** AGED ABOUT 71 YEARS, D/O LATE DASAPPA, RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA.	**PID: 98103/2026 FOR R[34] IN IN SLP(C) NO. 30025/2024, SLP© NO. 30026/ 2024SLP(C) NO.30025-30028/2024 (SEC IV-A)**
5 **SRI.NARASIMHA MURTHY,** S/O LATE PUTTAIAH, AGED ABOUT 55 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98104/2026 FOR R[35] IN IN SLP(C) NO. 30025/2024, SLP(C) NO. 30026/2024SLP(C) NO.30025-30028/2024 (SEC IV-A)**
6 **SRI.NARASIMHA MURTHY,** SON OF LATE MALLAIAH AGED ABOUT 63 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98105/2026 FOR R[36] IN IN SLP(C) NO. 30025/2024SLP(C) NO.30025-30028/2024 (SEC IV-A)**
7 **V.HARISH KUMAR,** S/O LATE M.VENKATARAMAIAH, MAJOR, R/O NO.33, 13TH STREET, AGRAHARA DASARAHALLI, MAGADI ROAD, BANGALORE-560079. KARNATAKA	**PID: 98106/2026 FOR R[60] IN IN SLP(C) NO. 30027/2024SLP(C) NO.30025-30028/2024 (SEC IV-A)**
8 **R.SHOBHA,** D/O Y.RAMAKRISHNA, W/O M.C. KESHAVAMURTHY, AGED ABOUT 37 YEARS, R/A NO.11/1, 1ST MAIN, 1ST CROSS, VALMIKINAGAR, MYSORE ROAD, BANGALORE-560026 KARNATAKA.	**PID: 98107/2026 FOR R[61] IN IN SLP(C) NO. 30027/2024SLP© NO.30025-30028/2024 (SEC IV-A)**
9 **SAROJAMMA,** AGED ABOUT 77 YEARS, W/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA.	**PID: 98108/2026 FOR R[66] IN IN SLP(C) NO.30028/2024SLP© NO.30025-30028/2024 (SEC IV-A)**
10 **SRI. M. S MOHAN KUMAR,** ABOUT 60 YEARS, S/O LATE K.N SRINIVASA GUPTA. RESIDING AT NO.9, BANASHANKARI, 2ND STAGE, 100 FEET ROAD, 4TH BLOCK, BANGALORE-560083., KARNATAKA.	**PID: 98109/2026 FOR R[67] IN IN SLP(C) NO. 30028/2024SLP(C) NO.30025-30028/2024 (SEC IV-A)**
11 **SRI.K.S. SURENDRA BABU,** AGED ABOUT 51 YEARS, S/O LATE K.N SRINIVASA GUPTA.RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA	**PID: 98110/2026 FOR R[68] IN IN SLP(C) NO. 30028/2024SLP(C) NO.30025-30028/2024 (SEC IV-A)**
12 **SRI.K.S VISHWAKIRAN,** AGED ABOUT 46 YEARS, S/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083., KARNATAKA.	**PID: 98111/2026 FOR R[69] IN IN SLP(C) NO.30028/2024SLP© NO.30025-30028/2024 (SEC IV-A)**
13 **SRI. R. V. SUDHIR,** S/O LATE RAJA VENKATARAMANA SHETTY. RESIDING AT NO.37/55, SURVEYOR ROAD, BASAVANAGUDI, BENGALURU-560004 KARNATAKA.	**PID: 98112/2026 FOR R[72] IN IN SLP(C) NO. 30028/2024SLP© NO.30025-30028/2024 (SEC IV-A)**
14 **RUDRA MURTHY** S/O H. S. SADASHIVAIAH, R/O ILLALU VILLAGE, YESWANTHAPURA HOBLI BENGALURU NORTH TALUK -560056, KARNATAKA.	**PID: 98113/2026 FOR R[77] IN IN SLP(C) NO.30028/2024SLP© NO.30025-30028/2024 (SEC IV-A)**
15 **CHANDRAN** S/O LATE NANJUNDAPPA, R/O ILLALU VILLAGE YESWANTHAPURA HOBLI, BENGALURU NORTH TALUK-560056 KARNATAKA	**PID: 98113/2026 FOR R[77] IN IN SLP(C) NO. 30028/2024SLP(C) NO.30025-30028/2024 (SEC IV-A)**
16 **NARASAPPA** S/O BASAPPA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98115/2026 FOR R[79] IN IN SLP(C) NO.30028/2024SLP(C) NO.30025-30028/2024 (SEC IV-A)**
17 **GANGARAJU** S/O NAGARAJU, R/O ILLALU VILLAGE YESWANTHAPURA HOBLI BENGALURU NORTH TALUK – 560056. KARNATAKA	**PID: 98116/2026 FOR R[80] IN IN SLP(C) NO. 30028/2024SLP(C) NO.30025-30028/2024 (SEC IV-A)**
18 **MUDDUHAHONNAIAH** S/O JAYANNA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98117/2026 FOR R[81] IN IN SLP(C) NO.30028/2024SLP(C) NO.30025-30028/2024 (SEC IV-A)**
19 **CHANDRAPPA** S/O LATE RAJAPPA, R/O ILLALU VILLAGE YESWANTHAPURA HOBLI BENGALURU NORTH TALUK – 560056 KARNATAKA	**PID: 98118/2026 FOR R[82] IN IN SLP(C) NO.30028/2024SLP(C) NO.30025-30028/2024 (SEC IV-A)**

WHEREAS the Petition for SPECIAL LEAVE PETITION (CIVIL) to Appeal with application for EXEMPTION FROM FILING O.T., EXEMPTION FROM FILING C/C OF THE IMPUGNED JUDGMENT, CONDONATION OF DELAY IN FILING, DISMISSAL OF APPEAL, INTERVENTION/IMPLEADMENT, EXEMPTION FROM FILING O.T., APPLICATION FOR SUBSTITUTION, EARLY HEARING APPLICATION, PERMISSION TO FILE APPLICATION FOR DIRECTION, EXEMPTION FROM APPOINTMENT OF OFFICIAL TRANSLATOR, PERMISSION TO FILE ADDITIONAL DOCUMENTS/FACTS/ANNEXURES, PERMISSION TO FILE ADDITIONAL DOCUMENTS/FACTS/ANNEXURES, EXEMPTION FROM FILING O.T., PERMISSION TO FILE APPLICATION FOR TO FILE DIRECTION, PERMISSION ADDITIONAL DOCUMENTS/FACTS/ANNEXURES above mentioned (copy enclosed) filed in the Registry by Ms. JAYASREE NARASIMHAN, Advocate on behalf of the Petitioner above named was listed for hearing before this Court on 09th December, 2024 along with the connected matters, when the Court was pleased to inter-alia pass the following order:-

"SPECIAL LEAVE PETITION (CIVIL) DIARY NO.
53577/2024

1.Delay condoned.
2. Issue notice.
3.Till the next date of hearing, the possession of the disputed property shall not be disturbed

WHEREAS, the matter was listed for hearing before this Court on 09th April, 2026 along with the connected matters, when the Court was pleased to pass the following order:-

"1. Mr. Kapil Sibal, learned senior counsel appearing for the State of Karnataka in SLP(C) No. 28248-28258/2024, submits that documents dating back to 1890 have since been traced which would prove the character of the lands in dispute as gomal'. According to him, these documents need to be placed on record since they have a material bearing on the special leave petitions under consideration.
2. Let such additional documents be placed on record by filing an appropriate application within three weeks.
3. Exception to such application may be taken by the petitioners within a week thereafter.
4. We have heard Mr. Debal Banerji, learned senior counsel appearing for K.S. Subbaraju - respondent No.7 in SLP (C) No. 30028/2024 in support of the prayer that the said petition should be dismissed.
5. Considering the submissions made by Mr. Sibal recorded above that the Government has since traced old records to the effect that disputed lands are 'gomal', we are of the considered opinion that the application seeking dismissal of SLP (C) No. 30028/2024 ought to be heard along with the special leave petitions.
6. Re-list the special leave petitions and all connected applications ca 21st May, 2026 at 12:00 noon.
7. Interim order, passed earlier, shall continue till the next date of hearing.
8. The latest office report has been read. Some of the respondents are yet to be served.
9. Fresh steps be taken by the State of Karnataka to effect service through paper publication, within two weeks from date. Notice may be published in one English daily newspaper, viz. Deccan Herald and one Kannada newspaper, viz. Kannada Prabha.
10. Once the paper publications are made, the related documents be filed before the Registry a week prior to the returnable date. Put up an appropriate office report."

NOW, THEREFORE, TAKE NOTICE that the above petition will be posted for hearing before this Court on 21st May, 2026 at 10.30 O' Clock in the forenoon or so soon thereafter as may be convenient to the Court when you may appear before the court either in person or through Counsel and show cause to the Court as to why Special Leave and interim relief as prayed for be not granted and the resultant appeal be not allowed.
You may file your affidavit in opposition to the petition as provided under Rule 14(1) of Order XXI, S.C.R.2013 immediately from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPS and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted..
TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.
Dated: 13th April, 2026
Copy to :-
1 Mr. Anirudh Sanganeria (adv.), **2** Ms. Jayasree Narasimhan (adv.), **3** Mr. Deepak Prakash (adv.) **4** Mr. Lzafeer Ahmad B. F. (adv.), **5** Ms. Patil Rekha Chandra Gouda (adv.), **6** Ms. Smriti Churiwal (adv.), **7** Mr. Javedur Rahman (adv.), **8** Mr. Vishnu Sharma A.s. (adv.)

Sd/-
ASSISTANT REGISTRAR

DIPR/CP/496/Zen/2026-27

ಯಳಂದೂರು ವ್ಯವಸಾಯೋತ್ಪನ್ನ ಸಂಘದ ನೂತನ ಅಧ್ಯಕ್ಷರಾಗಿ ಯೋಗೇಶ್ ಆಯ್ಕೆ

• **ಕನ್ನಡಪ್ರಭ ವಾರ್ತೆ** ಯಳಂದೂರು

ತಾಲೂಕು ವ್ಯವಸಾಯೋತ್ಪನ್ನ ಮಾರಾಟಗಾರರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆ. ಯೋಗೇಶ್, ಉಪಾಧ್ಯಕ್ಷರಾಗಿ ಕೊಮಾರನಪುರ ಪುಟ್ಟರಾಜು ಸೋಮವಾರ ಅವಿರೋಧವಾಗಿ ಆಯ್ಕೆಯಾದರು.

ಈ ಸಂಬಂಧ ಪಟ್ಟಣದಲ್ಲಿರುವ ಸಂಘದ ಕಚೇರಿಯಲ್ಲಿ ಚುನಾವಣಾಧಿಕಾರಿ ನೇತೃತ್ವದಲ್ಲಿ ಚುನಾವಣೆ ನಡೆಸಲಾಯಿತು. ಇವೆರಡೂ ಸ್ಥಾನಕ್ಕೂ ಕೂಡ ಒಬ್ಬೊಬ್ಬರೇ ನಾಮಪತ್ರವನ್ನು ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಇವರ ಆಯ್ಕೆಯನ್ನು ಅಧಿಕೃತವಾಗಿ ಘೋಷಣೆ ಮಾಡಲಾಯಿತು.

ನೂತನ ಅಧ್ಯಕ್ಷ ಜೆ. ಯೋಗೇಶ್ ಮಾತನಾಡಿ, ಕಳೆದ ಅವಧಿಯಲ್ಲಿ ಹಲವು ಕಾರಣಗಳಿಂದ ಈ ಸಂಘದಲ್ಲಿ ದೋಷಗಳು ಕಂಡು ಬಂದಿದ್ದವು. ಹಾಗಾಗಿ ಸಂಘವನ್ನು ಸೂಪರ್‌ಸೀಡ್ ಮಾಡಲಾಗಿತ್ತು. ಈ ಸಂಘಕ್ಕೆ ಹತ್ತಾರು ದಶಕಗಳ ಐತಿಹ್ಯವಿದ್ದು ಇದೊಂದು ತಾಲೂಕಿನ ಲಾಭದಾಯಕ ಸಂಘವಾಗಿತ್ತು. ಆ ವೈಭವವನ್ನು ಮರುಕಳಿಸುವ ನಿಟ್ಟಿನಲ್ಲಿ ನಾನು ಪ್ರಾಮಾಣಿಕವಾಗಿ ದುಡಿಯುತ್ತೇನೆ. ನಿರ್ದೇಶಕರ ಆಯ್ಕೆಯ ಸಂದರ್ಭದಲ್ಲೂ ಎಲ್ಲಾ 12 ಜನ ನಿರ್ದೇಶಕರನ್ನೂ ಸಹ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಎಲ್ಲರ ಬೆಂಬಲದೊಂದಿಗೆ ನಾನು ಅಧ್ಯಕ್ಷನಾಗಿ ಆಯ್ಕೆಯಾಗಿದ್ದೇನೆ. ಎಲ್ಲರ ಅಭಿಪ್ರಾಯಕ್ಕೂ ನಾನು ಮನ್ನಣೆ ನೀಡಿ ಸಂಘದ ಶ್ರೇಯೋಭಿವೃದ್ಧಿಗೆ



ಪ್ರಾಮಾಣಿಕವಾಗಿ ದುಡಿಯುತ್ತೇನೆ. ಸ್ಥಳೀಯ ಸಂಸದರು, ಶಾಸಕರು, ಎಂಸಿಡಿಸಿಸಿ ಬ್ಯಾಂಕ್‌ನ ಉಪಾಧ್ಯಕ್ಷರೂ ಸಹ ನಮ್ಮ ತಾಲೂಕಿನವರೇ ಆಗಿದ್ದಾರೆ, ಹಾಗಾಗಿ ಎಲ್ಲರ ನೆರವಿನೊಂದಿಗೆ ಈ ಸಂಘವನ್ನು ಲಾಭದತ್ತ ಕೊಂಡೊಯ್ಯಲು ನಾನು ಶಕ್ತಿ ಮೀರಿ ಕೆಲಸ ಮಾಡುತ್ತೇನೆ ಎಂದು ನುಡಿದರು.

ಉಪಾಧ್ಯಕ್ಷ ಕೊಮಾರನಪುರ ಪುಟ್ಟರಾಜು ಮಾತನಾಡಿದರು. ನೂತನ ಅಧ್ಯಕ್ಷ- ಉಪಾಧ್ಯಕ್ಷರಿಗೆ ತಹಸೀಲ್ದಾರ್ ಎಸ್.ಎಲ್. ನಯನ ಪ್ರಮಾಣಪತ್ರ ವಿತರಿಸಿದರು. ನಿರ್ದೇಶಕರಾದ ಮಹೇಶ್, ಗೌಡಹಳ್ಳಿ ಎಸ್.ರವಿ, ಎಂ.ಸಿ. ಶ್ರೀಕಂಠಮೂರ್ತಿ, ಆರ್. ರಾಜೇಶ್, ಸಿದ್ಧಶೆಟ್ಟಿ, ಪರಶಿವಮೂರ್ತಿ, ವೈ.ಎನ್. ಚೇತನ್‌ಕುಮಾರ್, ಪುಟ್ಟಚಾಮಮ್ಮ, ಮಹದೇವಮ್ಮ, ಸಿ. ನಂಜುಂಡಸ್ವಾಮಿ, ಕಾರ್ಯದರ್ಶಿ ರಮೇಶ್ ಸೇರಿದಂತೆ ಅನೇಕರು ಇದ್ದರು.

ವ್ಯಕ್ತಿ ಶವ ಪತ್ತೆ

ಹನೂರು: ಮೇಕೆದಾಟು ಅರಣ್ಯ ಪ್ರದೇಶದ ಸಿಪಿಟಿ- 21 ಗೇಟ್ ಸಮೀಪ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದೆ. ಹನೂರು ಪೊಲೀಸ್ ಠಾಣಾ ವ್ಯಾಪ್ತಿಯ ಕಾವೇರಿ ವನ್ಯ ಧಾಮ ಅರಣ್ಯ ಪ್ರದೇಶದಲ್ಲಿ ಸುಮಾರು 35- 40 ವರ್ಷದ ವ್ಯಕ್ತಿಯ ಶವ ಭಾಗಶಃ ಕೊಳೆತ ಸ್ಥಿತಿಯಲ್ಲಿ ಮರದ ಕೆಳಗೆ ಕಂಡುಬಂದಿದ್ದು, ಗುರುತು ಪತ್ತೆಯಾಗಿಲ್ಲ. ಪ್ರಾಥಮಿಕವಾಗಿ ಅಸ್ವಸ್ಥಗೊಂಡು ಸಾವನ್ನಪ್ಪಿರುವ ಸಾಧ್ಯತೆ ಇದೆ ಎಂದು ಶಂಕಿಸಲಾಗಿದೆ. ಈ ಸಂಬಂಧ ಪೊಲೀಸರು ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸುರೇಶ್ ನಿಧನ



ಗುಂಡ್ಲುಪೇಟೆ: ತಾಲೂಕಿನ ಕಬ್ಬಹಳ್ಳಿ ಗ್ರಾಮದ ನಿವಾಸಿ, ಬಿಡಿಎಲೆಕ್ಕಾಧಿಕಾರಿ ತೋಂಟದಾರ್ಯ ಅಲಿಯಾಸ್ ಕೆ.ವಿ. ಸುರೇಶ್ (59) ಸೋಮವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರಿಗೆ ತಾಯಿ, ಪತ್ನಿ, ಪುತ್ರ, ಸಹೋದರಿ ಇದ್ದಾರೆ. ಮೃತರ ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ತಾಲೂಕಿನ ಕಬ್ಬಹಳ್ಳಿ ಗ್ರಾಮದಲ್ಲಿ ವೀರಶೈವ ಲಿಂಗಾಯತ ಸಂಪ್ರದಾಯಂತೆನೆರವೇರಲಿದೆಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಸ್ತಿ ತೆರಿಗೆ ಪಾವತಿಗೆ ಅವಧಿ ವಿಸ್ತರಣೆ

ಚಾಮರಾಜನಗರ: ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿಗೆ ಶೇ.5ರಷ್ಟು ರಿಯಾಯಿತಿ ನೀಡಿದ್ದು, ಪಾವತಿ ಅವಧಿಯನ್ನು ಮೇ 31ರವರೆಗೆ ವಿಸ್ತರಿಸಲಾಗಿದೆ. ನೀರಿನ ಸೇವಾ ಶುಲ್ಕ, ಉದ್ದಿಮೆ ಪರವಾನಗಿ ಶುಲ್ಕ ಮತ್ತು ಉದ್ದಿಮೆ ನವೀಕರಣ ಶುಲ್ಕ, ಪುರಸಭೆಗೆ ಸೇರಿದ ಮಳಿಗೆ ಬಾಡಿಗೆ, ಜಾಹೀರಾತು ಶುಲ್ಕಗಳನ್ನು ನಿಗದಿಪಡಿಸಿರುವ ಬ್ಯಾಂಕ್ ಗಳಲ್ಲಿ ನಗದು/ಡಿಡಿ/ಚೆಕ್ ಅಥವಾ ಆನ್‌ಲೈನ್ ನ ಇ-ಪಾವತಿ, ನೆಟ್ ಬ್ಯಾಂಕಿಂಗ್ ಮೂಲಕ ಪಾವತಿ ಮಾಡಲು ಮೇ 31 ಕೊನೆಯ ದಿನವಾಗಿದೆ.